ಮತ್ತೆ ಕಣ್ಮುಂದೆ ಬಂತು. ಮನ ಭಾರವಾಗಿತ್ತು. ಕರ್ಮ ಕಳೆಯುವವರೆಗೆ ಕಾಯದೇ ವಿಧಿಯಿಲ್ಲ. ನಿದ್ದೆ ಹತ್ತುತ್ತಿರುವಂತೆಯೇ 'ಯು ಹ್ಯಾವ್ ಎ ಸರ್‌ಪ್ರೈಸ್, ಇನ್ನೊಂದು ಅರ್ಧ ಗಂಟೆ ಎದ್ದಿರು ಪ್ಲೀಸ್' ಜಿಷ್ಣುವಿನ ಮೆಸೇಜ್. ಕುತೂಹಲವೆನಿಸಿತು. ಏನಿರಬಹುದು? ಎಂಬ ಜಿಜ್ಞಾಸೆಯಲ್ಲಿ ನಿದ್ದೆ ಹಾರಿತ್ತು. ಕೈಗೆಟಕುವಂತಿದ್ದ ಪುಸ್ತಕದಲ್ಲಿ ಕಣ್ಣಾಡಿಸತೊಡಗಿದೆ, ಏಕಾಗ್ರತೆ ಮೂಡಲಿಲ್ಲ. ಕರೆಗಂಟೆ ಶಬ್ದಿಸಿದಾಗ ಯಾರಿರಬಹುದೆಂಬ ಗಾಬರಿಯಲ್ಲಿ ಬಾಗಿಲಿನ ಮಸೂರದಿಂದ ನೋಡಿದರೆ ಜಿಷ್ಣು! ಲಗುಬಗೆಯಿಂದ ಬಾಗಿಲು ತೆಗೆದೆ. 'ಅಮ್ಮಾ ಹೇಗಿದೆ ಸರ್‌ಪ್ರೈಸ್' ಎಂದಾಗ ಸಂತೋಷದಿಂದ ಕಣ್ತುಂಬಿತ್ತು.

***

ಜಿಷ್ಣು ಫ್ರೆಶ್ ಆಗಿ ಬರುವುದರೊಳಗೆ ಬಿಸಿ ಕಾಫಿ ತಯಾರಿಸಿದ್ದೆ.

'ಎಷ್ಟು ದಿನ ಆಯಿತು ಈ ರುಚಿ ನೋಡಿ' ಎಂದು ಚಪ್ಪರಿಸಿದ.

'ಈ ಬಾರಿ ಎಷ್ಟು ದಿನ? ಯಾವ ಕ್ಲಾಸಮೇಟ್‌ನ ಮದುವೆ?' ರೇಗಿಸಿದೆ.

ಇಲ್ಲದಿದ್ರೆ ಹೀಗೆ ದಿಢೀರ್ ಅಂತ ಬರೊಲ್ಲವಲ್ಲ?

'ಒಂದು ರೀತಿ ಹಾಗೆ ಅಂದ್ಕೋಬಹುದು. ಮುಖ್ಯವಾಗಿ ನಾನು ಅಮೆರಿಕ ಬಿಟ್ಟಾಯ್ತು, ಇನ್ಮೇಲೆ ಇಲ್ಲೇ ಕೆಲಸವೂ, ಹ್ಯಾಪಿ?'

'ಕೇಳೊದೇನು? ವೆರಿ ಹ್ಯಾಪಿ' ಎಂದೆ.

'ಅಮ್ಮ ಇನ್ನೊಂದು ವಿಷಯ, ನೀನು ಹೇಗೆ ರಿಯಾಕ್ಟ್ ಮಾಡ್ತೀಯೋ ಗೊತ್ತಿಲ್ಲ ಬಟ್ ಟ್ರಸ್ಟ್ ಮೀ.'

'ಇದ್ಯಾವುದೋ ಹೊಸ ವಿಷಯಕ್ಕೆ ಪೀಠಿಕೆ? ಏನಾದರೂ ಸರಿ, ನಾನು ಮುಕ್ತ ಮನಸ್ಸಿನಿಂದ ಕೇಳೋಕ್ಕೆ ಸಿದ್ಧ' ಎಂದೆ.

'ಈ ಫೋಟೊ ನೋಡು' ಮೊಬೈಲಿನಲ್ಲಿ ಒಬ್ಬ ಹುಡುಗಿಯ ಚಿತ್ರ ತೋರಿಸಿದ.

'ಚೆನ್ನಾಗಿದ್ದಾಳೆ, ಮದ್ವೆ ಮಾಡ್ಕೊತೀಯಾ?' ನಸುನಕ್ಕೆ.

'ಇದು' ಮತ್ತೊಂದು ಫೋಟೊ ಪುಟ್ಟ ಮಗು.

'ಮುದ್ದಾಗಿದ್ದಾನೆ' ಎಂದೆ.

'ಇವನಿಗೆ ಅಪ್ಪನಾಗಬೇಕು ಅಂತ ನಿರ್ಧಾರ ಮಾಡಿದ್ದೀನಿ, ಮೊದಲು ನೋಡಿದ್ಯಲ್ಲ ಅವಳ ಮಗು, ದೀಪಾಂಕರ್, ಮುದ್ದಾಗಿ ದೀಪು, ಇನ್ನೇನು ನಾಲ್ಕು ವರ್ಷ ಆಗುತ್ತೆ.'

ಒಂದೆರಡು ನಿಮಿಷ ಮೌನ.

'ಸಮನ್ವಿತಾ ಅಂತ, ಇಲ್ಲೇ ಬ್ಯಾಂಕ್‌ನಲ್ಲಿ ಕೆಲಸದಲ್ಲಿದ್ದಾಳೆ. ಅವಳ ಗಂಡ ಅಪಘಾತದಲ್ಲಿ ತೀರಿಕೊಂಡು ವರ್ಷವಾಯ್ತು. ಅವಳ ಅಣ್ಣ ನಾನೂ ಒಟ್ಟಿಗೆ ಓದಿದವರು, ಒಳ್ಳೆಯ ಕುಟುಂಬ. ನನ್ನನ್ನು ಚೆನ್ನಾಗಿ ಬಲ್ಲವರು...' ಜಿಷ್ಣು ಹೇಳುತ್ತಲೇ ಇದ್ದ.

ಅಪ್ಪನಿಲ್ಲದ ಸಂಕಟ ನೋವು ಇವನಿಗೆ ತಿಳಿಯದ್ದೇನಲ್ಲ, ಚೆನ್ನಾಗಿ ಯೋಚನೆ ಮಾಡಿಯೇ ಈ ನಿರ್ಧಾರಕ್ಕೆ ಬಂದಿರ್ತಾನೆ. ಇವನಿಗೆ ಇಷ್ಟವಾಗಿದೆಯೆಂದರೆ ನಾನ್ಯಾಕೆ ಬೇಡವೆನ್ನಲಿ? ನನ್ನ ಮನಸ್ಸೂ ಒಂದು ತೀರ್ಮಾನಕ್ಕೆ ಬಂದಿತ್ತು.

'ಒಳ್ಳೆಯ ವಿಷಯ ಮುಂದಕ್ಕೆ ತಳ್ಳಿ ಹಾಕುವುದು ಬೇಡ, ಈ ಭಾನುವಾರ ಮುಹೂರ್ತದ ದಿನ ಚೆನ್ನಾಗಿದೆ, ಅವರ ಮನೆಯವರನ್ನು ಬರೋಕೆ ಹೇಳು, ದೀಪೂನ್ನು ಕರ್ಕೊಂಡು ಬರಲಿ' ಎಂದೆ.

'ನೀನು ಒಪ್ಪಿಕೊಳ್ತೀಯಾ ಅನ್ನೋ ಭರವಸೆ ಇತ್ತಮ್ಮ. ಥ್ಯಾಂಕ್ಸ್ ಸೋ ವೆರಿ ಮಚ್' ಆಪ್ತವಾಗಿ ಅಪ್ಪಿ, 'ನಾನು ಈಗ್ಲೇ ಮೆಸೇಜ್ ಮಾಡ್ತೀನಿ, ಅವ್ರು ಕಾಯ್ತಾ ಇರ್ತಾಳೆ' ಎಂದು ಮೇಲೆದ್ದ.

ಶ್ರೀಲೋಲನ ಹೆಂಡತಿ ಅನ್ನುವ ಪಟ್ಟಕ್ಕಿಂತ, ದೀಪುವಿನ ಅಜ್ಜಿ ಅನ್ನಿಸಿಕೊಳ್ಳುವುದು ಹೆಚ್ಚು ಒಪ್ಪಿತ ಅನ್ನಿಸಿ, ತೃಪ್ತ ನಗೆ ಬೀರಿದೆ. ●

